# ಭಾರತೀಶನೆ ಎನ್ನ ಭವಜನಿತ ದುಃಖವ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 421.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics, with few differences.

ರಾಗ: ಮಧ್ಯಮಾವತಿ ತಾಳ: ತ್ರಿಪುಟ

ಭಾರತೀಶನೆ ಎನ್ನ ಭವಜನಿತ ದುಃಖವ
ದೂರಮಾಡುತಿ ಘನ್ನ ಸನ್ನುತವರೇಣ್ಯ || ಪ ||

ವಾರವಾರದಿ ಭಜಿಪೆ ನಿನ್ನ ಮು-
ರಾರಿ ವಾರಿಜ ಪದದಿ ಎನ ಮನ
ಸೇರಿ ಶಾಂತದಿ ಮುಕುತಿ ಪಥವನು
ತೋರಿ ಪೊರೆ ಕರುಣಾಳು ಉತ್ತಮ || ಅಪ ||

ವಾಯುಸುತ ಹೇ ಧೀರ, ಶ್ರೀ ರಾಮ ಕಿಂಕರ
ರಾಯ ಮಹಾದುರ್ಧರ, ಸದ್ಗುಣ ಗಣಾಂಬುಧಿ
ಮಾಯ ದನುಜ ವಿದಾರ ಸುಚರಿತ್ರ ಶೂರ
ತೋಯ ಜಾಂಬಕನ ಸತಿಯಳ ಖಳ ನಾಯಕನು ಬಂದೊಯ್ಯೆ ಕಪಟದಿ
ಜೀಯನೇ ವಾರಿಧಿಯ ಲಂಘಿಸಿ ಕಾಯಜನ ಪಡೆದಾಕೆಗುಂಗುರ
ಈಯಲಿತ್ತಲು ವನದೊಳಿಹ ಖಳ ನಾಯಕರು ಬಂದ್ಹಿಡಿಯೆ ಅವರ
ಕಾಯ ಖಂಡಿಸಿ ತಿರುಗಿ ದಶರಥ ಪ್ರಿಯನಿಗೆ ಸು-ಕ್ಷೇಮ ತಿಳುಹಿದ || 1 ||

ಕುರುಕುಲಾಂಬುಧಿಸೋಮ ಎಂದೆನಿಸಿದನೆ, ಮಹಾ
ಗುರುಪರಾಕ್ರಮ ಭೀಮ, ದ್ರೌಪದಿ ಮನೋಜಯ

ಕರುಣವಾರಿಧಿ ಸೋಮ ರಣರಂಗಧಾಮ
ದುರುಳ ದುರ್ಯೋಧನನು ನಿಮ್ಮನು ಅರಗಿನ ಮನೆಯಲ್ಲಿ ಪೊಗಿಸಲು
ಹಿರಿಯ ಧರ್ಮಾದಿಗಳ ಕೈಗೊಂಡ್ವರುಷದಿಂದಲಿ ತೆರಳಿ ಬಂದ-
ವರ ಹಿಡಿಂಬಕ ಬಕ ಮುಖಾದ್ಯರ ತರಿದು ಯದುಕುಲಜಾತ ಕೃಷ್ಣನ
ಪರಮ ಕಿಂಕರನಾಗಿ ಸತತದಿ ಮೆರೆವ ಪಾಂಡವಜಾತ ಖ್ಯಾತ || 2 ||

ಮಧ್ಯ ಗೇಹನೊಳುದಿಸಿ ವರವೀರ ವೈಷ್ಣವ ಪದ್ಧತಿಗಳನುಸರಿಸಿ
ಮಾಯ್ಗಳ ಕುಭಾಷ್ಯವ ಗೆದ್ದು ಗುರುವೆಂದೆನಿಸಿ ಮಧ್ವಾಖ್ಯನೆನಿಸಿ
ಸಿದ್ಧ ಮೂರುತಿ ಹರಿಯನುಗ್ರಹ ಬದ್ಧರಾದ ಜನಕೆ ಭೇದವ
ತಿದ್ದಿ ತಿಳುಹಿದ ಮುನಿವರೇಂದ್ರ ಪ್ರಸಿದ್ಧವಾದಾಪರಾಜಿತನೆ ಎ-
ನ್ನುದ್ಧರಿಸುತಲಿ ಚೆಂದದಲಿ ಪ್ರಸಿದ್ಧ ಮೌನಿ ಗಿರಿಯಲಿ ನಿಂದಿಹ
ಮಧ್ವಪತಿ ಪುರಂದರವಿಠಲ ದೂತ ಮುದ್ದು ಪ್ಲವಗಾಧಿಪರ ಶೇಖರ || 3 ||

**Classification:** Keerthane
**Ankita:** madhvapati purandara vittala
**Location:** NA
**Category:** Hanuma Stuti
**Sub-Category:** hanuma, hanuma-bhima-madhva, Bharati, dukha, bhajane, mana, karuna, Samudra, sita, rama, mukti, ungura, kaadu, Dasharatha, Priya, bhima, madhva, dharma, draupadi, kourava, santosha, Krishna, pandava, jana, muni, parvata,
**Pravachana:** NA
**Explanation:** NA